ದಿನಾಂಕ :22-04-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

1 ನೇ ಪ್ರತಿವಾದಿಯ ತಂದೆ ಬಸವೇಗೌಡ ನನಗೆ ಗೊತ್ತು . ಸದರಿ ಬಸವೇಗೌಡರವರ ತಂದೆಯ ಹೆಸರು ಸಿದ್ದನಂಜೇಗೌಡ . ಸದರಿ ಸಿದ್ದನಂಜೇಗೌಡ ರವರು ಊರಿನಲ್ಲಿ ಪಟೇಲರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ಗ್ರಾಮದವರು ಹೇಳುತ್ತಾರೆ . ಹಿಂದೆ ಗ್ರಾಮದಲ್ಲಿ ಪಟೇಲರಾಗಿ ಕೆಲಸ ಮಾಡುವವರು ಗ್ರಾಮದ ಜನರ ಬಳಿ ಕಂದಾಯ ಸಂಗ್ರಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ . ಸಿದ್ದನಂಜೇಗೌಡ ರವರು ಪಟೇಲರಾಗಿ ಕೆಲಸ ಮಾಡುತ್ತಿದ್ದ ಕಾರಣ ಮತ್ತು ದಾಖಲೆಗಳನ್ನು ಬರೆಯುತ್ತಿದ್ದ ಕಾರಣ ದಾವಾ ಸ್ವತ್ತಿನ ದಾಖಲೆಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ವಾದಿಗಳಿಗೆ ತಿಳುವಳಿಕೆ ಇಲ್ಲದಿದ್ದ ಕಾರಣ ಸದರಿ ಸಿದ್ದನಂಜೇಗೌಡ ರವರು ತಮ್ಮ ಹೆಸರಿಗೆ ದಾಖಲೆಗಳನ್ನು ಮಾಡಿಕೊಂಡು ವಾದಿಗಳಿಗೆ ತೊಂದರೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ಸರ್ವೆ ನಂ. 18 ರಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸರ್ವೆ ನಂ. 18 ರಲ್ಲಿ ಒಟ್ಟು 4 ಎಕರೆ 37 ಗುಂಟೆ ವಿಸ್ತೀರ್ಣದ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸದರಿ 4 ಎಕರೆ 37 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಒಟ್ಟು 5 ಪೋಡುಗಳಾಗಿ ಮಾಡಿದ್ದು ಅವುಗಳಿಗೆ ಸರ್ವೆ ನಂ. 18/1 ರಿಂದ 18/5 ಎಂಬುದಾಗಿ ಹೊಸ ಸಂಖ್ಯೆಗಳನ್ನು ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ . ಸರ್ವೆ ನಂ. 18 ಮೂಲತಃ ಕಾಳಮ್ಮ ಕೋಂ ಕಾಳಸಿದ್ದನಂಜಯ್ಯ ರವರಿಗೆ ಸೇರಿತ್ತು ಎಂದರೆ ಸರಿಯಲ್ಲ . ನಿಪಿ -1 ರಲ್ಲಿ ಆ ಬಗ್ಗೆ ವಿವರಗಳು ಇವೆ ಎಂದರೆ ನನಗೆ ಗೊತ್ತಿಲ್ಲ . ಸರ್ವೆ ನಂ. 18/5 ರಲ್ಲಿ 1 ಎಕರೆ 24 ಗುಂಟೆ ಸ್ವತ್ತು ರಂಗಮ್ಮ ರವರಿಗೆ ಹೇಗೆ ಬಂತು ಎಂದು ನನಗೆ ಮಾಹಿತಿ ಇಲ್ಲ . ರಂಗಮ್ಮ ರವರ ಮಾಲಿಕತ್ವದ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ , ಅವರು ಅಲ್ಲಿ ಓಡಾಡುತ್ತಿದ್ದ ಕಾರಣ ಹೇಳುತ್ತಿದ್ದೇನೆ ಎಂದು ಸಾಕ್ಷಿ ಹೇಳಿದ್ದಾರೆ . ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಎಂದೂ ಸ್ವಾಧೀನ ಹೊಂದಿಲ್ಲ, ವಾದಿಗಳು ಮತ್ತು ಪೂರ್ವಜರು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಅವರ ಪೂರ್ವಜರು ದಾವಾ ಸ್ವತ್ತಿನ ಸಂಬಂಧ ದಾಖಲೆಗಳನ್ನು ಸೃಷ್ಟಿಸಿಕೊಂಡು ವಾದಿಗಳಿಗೆ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ 200 ಮೀಟರ್ ದೂರದಲ್ಲಿ ನನ್ನ ಪಿತ್ರಾರ್ಜಿತ ಸ್ವತ್ತು ಇದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ತಿಳಿಸಿಲ್ಲ . ನಾನು ಮತ್ತು ಪ್ರತಿವಾದಿ ಸಾಕ್ಷಿ -1 ರವರು ಒಂದೇ ಗ್ರಾಮದವರಾಗಿದ್ದು ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ವಾದಿಗಳು ತೆಂಗಿನ ಮರಗಳನ್ನು ನೆಟ್ಟಿದ್ದಾರೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಮರಗಳನ್ನು ನೆಟ್ಟಿದ್ದಾರೆ ಎಂದು ತಿಳಿಸಿದ್ದಾರೆ . ವಾದಿಗಳು ದಾವಾ ಸ್ವತ್ತಿನಲ್ಲಿ ತೆಂಗಿನ ಮರಗಳನ್ನು ನೆಟ್ಟಿದ್ದು ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ . ದಾವಾ ಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಯ ಮೇಲಿನ ವಿಶ್ವಾಸದಿಂದ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂಬರ್ 10 ಗುಂಟೆ ಸ್ವತ್ತನ್ನು 2 ನೇ ಪ್ರತಿವಾದಿ ಸ್ವಾಧೀನಪಡಿಸಿಕೊಂಡಿದ್ದಾರೆ . 1 ನೇ ಪ್ರತಿವಾದಿಯು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು 2 ನೇ ಪ್ರತಿವಾದಿಯಿಂದ ಸದರಿ 10 ಗುಂಟೆಗೆ ಸಂಬಂಧಿಸಿ ಪರಿಹಾರದ ಹಣವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .